ಕ್ರಮಗಳನ್ನು ಜರುಗಿಸಲಾಗುತ್ತಿದೆ. ಮತೀಯ ಗಲಭೆಕೋರರ ಪಟ್ಟಿಯನ್ನು ನಿರ್ವಹಿಸುತ್ತಿದ್ದು ಅವರ ವಿರುದ್ಧ ಮುಂಜಾಗ್ರತಾ ಕ್ರಮವಾಗಿ ಸೂಕ್ತ ಕಾನೂನು ಪ್ರತಿಬಂಧಕ ಕ್ರಮಗಳನ್ನು ಜರುಗಿಸಾಲಗುತ್ತಿದೆ. ಅಂತಹ ವ್ಯಕ್ತಿಗಳ ಮೇಲೆ ಸೂಕ್ಷ್ಮ ನಿಗಾವಹಿಸಲಾಗುತ್ತಿದೆ.

ಪ್ರಶ್ನೆ ಸಂಖ್ಯೆ : 54 (180) ಶ್ರೀನಿವಾಸ್ ನಿಗ್ಲಿ (ನಾಮಾಂಕಿತ)

ಮಾನ್ಯ ಮುಖ್ಯಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ?

ಅ) ಬೆಂಗಳೂರು ನಗರದ ವ್ಯಾಪ್ತಿಯಲ್ಲಿ ಕಸ ಹಾಕಲು ಗುರುತಿಸಿರುವ ಜಾಗಗಳು ಯಾವುವು (ಪ್ರದೇಶಾವಾರು ವಿವರವನ್ನು ನೀಡಿ);

ಆ) ಪ್ರತಿದಿನ ಸಂಗ್ರಹವಾಗುವ ಕಸ ಎಷ್ಟು; (ಟನ್‌ವಾರು ವಿವರವನ್ನ ನೀಡಿ);

ಇ) ವಿದ್ಯುತ್ ಸಂಗ್ರಹ ಘಟಕಗಳನ್ನು ಸ್ಥಾಪಿಸುವ ಘಟಕಗಳ ಪೈಕಿ ಪುನರ್ ಉಪಯೋಗ ಘಟಕಗಳನ್ನು ಸ್ಥಾಪಿಸುವ ಉದ್ದೇಶ ಸರ್ಕಾರಕ್ಕಿದೆಯೇ;

ಈ) ಹಾಗಿದ್ದಲ್ಲಿ, ಯಾವ ಜಾಗಗಳಲ್ಲಿ ಯಾವ ಘಟಕಗಳು ಸ್ಥಾಪಿತವಾಗಿವೆ;

ಉ) ಇಲ್ಲದಿದ್ದರೆ, ಏಕೆ? ಈ ರೀತಿಯ ಘಟಕಗಳ ಪ್ರಸ್ತಾವನೆ ಅಥವಾ ಯೋಜನೆ ಇದೆಯೇ?

ಶ್ರೀ ಹೆಚ್.ಡಿ.ಕುಮಾರಸ್ವಾಮಿ ಮಾನ್ಯ ಮುಖ್ಯಮಂತ್ರಿ

ಅ) ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿನ ಈ ಕೆಳಕಂಡ ಜಾಗಗಳನ್ನು ಕಸ/ಘನತ್ಯಾಜ್ಯ ವಸ್ತುಗಳ ವಿಲೇವಾರಿಗಾಗಿ ಗುರುತಿಸಲಾಗಿದೆ.

1. ಸರ್ವೆ ನಂ. 8, ಮಾವಳ್ಳಿಪುರ, ಹೆಸರಘಟ್ಟ ಹೋಬಳಿ, ಬೆಂಗಳೂರು.

2. ಕರ್ನಾಟಕ ಕಾಂಪೋಸ್ಟ್ ಡೆವಲಪ್‌ಮೆಂಟ್ ಕಾರ್ಪೊರೇಷನ್, ಕೂಡ್ಲು, ಹೊಸೂರು ರಸ್ತೆ, ಬೆಂಗಳೂರು.

3. ಸರ್ವೆ ನಂ. 155, ಮಂಡೂರು ಗ್ರಾಮ, ಬಿದರಹಳ್ಳಿ ಹೋಬಳಿ ಬೆಂಗಳೂರು (ಇನ್ನೂ ಪ್ರಾರಂಭವಾಗಬೇಕಾಗಿದೆ.)

4. ಸರ್ವೆ ನಂ. 143ಸ, ಕುಂಬಳಗೋಡು.

5. ಸರ್ವೆ ನಂ. 77, 44, 23, ಚಿಮ್ಮಸಂದ್ರ ಹಳ್ಳಿ, ಹೊಸಕೋಟೆ ಹೋಬಳಿ, ಬೆಂಗಳೂರು.

ಆ) ಸುಮಾರು 3000 ಟನ್‌ಗಳಷ್ಟು ಕಸ/ಘನ ತ್ಯಾಜ್ಯ ಪ್ರತಿ ನಿತ್ಯ ಸಂಗ್ರಹವಾಗುತ್ತದೆ.

ಇ) ಹೌದು.

ಈ) ಬೆಂಗಳೂರು ತಾಲ್ಲೂಕಿನ ಮಂಡೂರು ಗ್ರಾಮದ, ಬಿದರಹಳ್ಳಿ ಹೋಬಳಿಯ ಸರ್ವೆ ನಂ. 155ರ 135 ಎಕರೆ ಪ್ರದೇಶದಲ್ಲಿ ಕಸದ ಪುನರ್ ಬಳಕೆ ಘಟಕದ ನಿರ್ಮಾಣಕ್ಕಾಗಿ ಬಳಸಲಾಗಿದೆ.

ಉ) ಉದ್ಭವಿಸುವುದಿಲ್ಲ.

ಉಡುಪಿ ಜಿಲ್ಲೆಯಲ್ಲಿ ಅನೈತಿಕ ಚಟುವಟಿಕೆ ಹೊಂದಿದ್ದ ಹೋಟೆಲ್‌ಗಳನ್ನು ಕುರಿತು.

ಪ್ರಶ್ನೆ ಸಂಖ್ಯೆ : 55(14) ಶ್ರೀ ಜಯಪ್ರಕಾಶ್ ಹೆಗ್ಡೆ ಕೆ. (ಬ್ರಹ್ಮಾವರ)

ಮಾನ್ಯ ಗೃಹ, ಕಾನೂನು, ನ್ಯಾಯ ಮತ್ತು ಸಂಸದೀಯ ವ್ಯವಹಾರಗಳ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ?

ಅ. ಕಳೆದ ಎರಡು ವರ್ಷಗಳಲ್ಲಿ ಉಡುಪಿ ಜಿಲ್ಲೆಯಲ್ಲಿ ಅನೈತಿಕ ಚಟುವಟಿಕೆ ಹೊಂದಿದ್ದ ಹೋಟೆಲ್‌ಗಳು ಯಾವುವು? ಹೋಟೆಲ್ ಮಾಲೀಕರು ಯಾರು?

ಆ. ಈ ಬಗ್ಗೆ ಸರ್ಕಾರ ಕೈಗೊಂಡ ಕ್ರಮವೇನು?